ಓ.ಎಸ್. ನಂ. 9/2011
ಪಿ ಡಬ್ಲ್ಯೂ -1

**ಸಾಕ್ಷಿಯನ್ನು ದಿನಾಂಕ: 19-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ 2 ರಿಂದ 5 ರವರ ಪರ ಶ್ರೀ BLN ವಕೀಲರಿಂದ**

ನನ್ನ ತಾತನಿಗೆ ಇಬ್ಬರು ಹೆಂಡತಿಯರು ಇದ್ದು, ನನ್ನ ತಂದೆ ನನ್ನ ತಾತನ 2 ನೇ ಹೆಂಡತಿಯ ಮಗನಾಗಿರುತ್ತಾನೆ. ನನ್ನ ತಾತನ ಮೊದಲನೇ ಹೆಂಡತಿಗೆ ಇಬ್ಬರು ಮಕ್ಕಳಿದ್ದು, ಅವರು ಯಾರೆಂದು ನನಗೆ ಗೊತ್ತಿಲ್ಲ. ನನ್ನ ತಾತನ 2 ನೇ ಹೆಂಡತಿಯ ಮಕ್ಕಳ ವಾರಸುದಾರರು ಈಗಲೂ ಜೀವಂತ ಇರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಳ್ಳುವವರೆಗೂ ನನ್ನ ತಾಯಿ ಅವರ ಜೊತೆ ವಾಸ ಮಾಡುತ್ತಿದ್ದರು. 1988 ನೇ ಸಾಲಿನಲ್ಲಿ ನನ್ನ ತಾಯಿ ನನ್ನ ತಂದೆಗೆ ನೊಂದಣಿ ಬಿಡುಗಡೆ ಪತ್ರವನ್ನು ಬರೆದುಕೊಟ್ಟು ಹೊರಟು ಹೋಗಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಪ್ರತಿವಾದಿಗಳು ಈ ದಾವೆಯಲಿಲ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ನನ್ನ ತಾಯಿ ನೊಂದಣಿ ಬಿಡುಗಡೆ ಪತ್ರ ಬರೆದುಕೊಟ್ಟ ಬಗ್ಗೆ ಪ್ರತಿವಾದಿಗಳು ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತಾರೆಂದರೆ ಸರಿಯಲ್ಲ.

ನಾವು ಈ ದಾವೆಯನ್ನು ಸರ್ವೆ ನಂ. 69/1, 59/1, 90/2, ಒಂದು ದೊಡ್ಡ ಮನೆ, 3 ಸೈಟಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇವೆ. ದಾವಾ ಆಸ್ತಿಗಳ ವಿಸ್ತೀರ್ಣ ಹಾಗೂ ಚೆಕ್ಕುಬಂದಿ ನನ್ನಿಂದ ಹೇಳಲು ಆಗುವುದಿಲ್ಲ. ದಾವಾ 3 ಮತ್ತು 5 ನೇ ಆಸ್ತಿ ಪಿತ್ರಾರ್ಜಿತ ಆಸ್ತಿಗಳಾಗಿದ್ದು ಉಳಿಕೆ ಆಸ್ತಿಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ. ದಾವಾ 4 ನೇ ಆಸ್ತಿಗಳಲ್ಲಿ ನನ್ನ ತಂದೆ ಕ್ರಯಕ್ಕೆ ಪಡಿದಿರುವ ಬಗ್ಗೆ ನನಗೆ ಗೊತ್ತು. ಮಾರಾಟ ಮಾಡಿರುವ ಬಗ್ಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಮಾರಾಟ ಆಗಿವೆ ಎಂದು ಹೇಳುತ್ತಿರುತ್ತಾರೆ. ದಾವಾ 4 ನೇ ಆಸ್ತಿಗಳು ಮಾರಾಟ ಆಗಿರುವ ಬಗ್ಗೆ ಈ ಕೇಸು ದಾಖಲಿಸುವ ಮೊದಲು ಗೊತ್ತಾಗಿರುತ್ತದೆ. ಸದರಿ ಆಸ್ತಿಗಳನ್ನು ಯಾರಿಗೆ ಮಾರಾಟ ಮಾಡಿರುತ್ತಾರೆಂಬ ಬಗ್ಗೆ ನಾನು ದಾಖಲೆಗಳನ್ನು ತೆಗೆದುಕೊಂಡು ಪರಿಶೀಲನೆ ಮಾಡಿರುವುದಿಲ್ಲ. ನನ್ನ ತಂದೆ ದಾವಾ 4 ನೇ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ನನ್ನ ತಂದೆ ಸದರಿ ಆಸ್ತಿಗಳನ್ನು ಯಾರಿಗೆ ಮಾರಾಟ ಮಾಡಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ 4 ನೇ ಆಸ್ತಿ ಖಾತೆ ಈಗ ಯಾರ ಹೆಸರಿನಲ್ಲಿರುತ್ತದೆಂದು ನನಗೆ ಗೊತ್ತಿಲ್ಲ. ದಾವಾ 4 ನೇ ಆಸ್ತಿ ರಾ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಯಾರ ಹೆಸರಿನಲ್ಲಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. 4 ನೇ ಆಸ್ತಿಯನ್ನು ಕ್ರಯಕ್ಕೆ ಪಡೆದಿರುವವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ 4 ನೇ ಆಸ್ತಿಯಲ್ಲಿ ನಮಗೆ ಭಾಗ ಬೇಕಿಲ್ಲ ಎಂದರೆ ಸರಿಯಲ್ಲ. ದಾವಾ 4 ನೇ ಆಸ್ತಿಯನ್ನು

ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿರುತ್ತೇವೆಂದರೆ ಸರಿಯಲ್ಲ.

5 ನೇ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿಯನ್ನು ನನ್ನ ತಂದೆ ಅವರ 2 ನೇ ಹೆಂಡತಿಯಾದ ಭಾಗ್ಯಮ್ಮರವರ ಜೀವನಂಶಕ್ಕಾಗಿ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನನ ತಂದೆ ಭಾಗ್ಯಮ್ಮ ರವರನ್ನು ಯಾವಾಗ ಮದುವೆ ಮಾಡಿಕೊಂಡಿರುತ್ತಾರೆಂದರೆ ಗೊತ್ತಿಲ್ಲ. ನನ್ನ ತಂದೆ-ತಾಯಿ ನನ್ನ ತಂದೆ 2 ನೇ ಮದುವೆ ಮಾಡಿಕೊಳ್ಳಬಹುದು ಎಂದು ನೊಂದಾಯಿತ ಬಿಡುಗಡೆ ಪತ್ರವನ್ನು ನನ್ನ ತಾಯಿ ಬರೆದುಕೊಟ್ಟು ಹೋದ ನಂತರ ನನ್ನ ತಂದೆ ಬಾಗ್ಯಮ್ಮರವರನ್ನು 2 ನೇ ಮದುವೆ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿ ಬೆಲೆಬಾಳುವ ಒಡವೆ ಮತ್ತು ಹಣವನ್ನು ಪಡೆದುಕೊಂಡು ಅವರಿಗೆ ಸೇರಿದ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದು ಸದರಿ ಬಿಡುಗಡೆ ಪತ್ರದಲ್ಲಿ ಬರೆದಿರುತ್ತಾರೆಂದರೆ ಸರಿಯಲ್ಲ. ಸದರಿ ಬಿಡುಗಡೆ ಪತ್ರವನ್ನು ಬರೆದುಕೊಟ್ಟ ನಂತರ ನನ್ನ ತಾಯಿ ನನ್ನ ತಂದೆಯ ಜೊತೆ ವಾಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೊಂದಣಿ ಬಿಡುಗಡೆ ಪತ್ರದ ಪ್ರಕಾರ ನನ್ನ ತಾಯಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಹಾಗೂ ನನ್ನ ಚಿಕ್ಕಮ್ಮ ಬಾಗ್ಯಮ್ಮ ರವರು ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಎಂದರೆ ಸರಿ. ನನ್ನ ತಂದೆ ಭಾಗ್ಯಮ್ಮರವರನ್ನು ಮದುವೆಯಾಗುವ ವಿಚಾರ ನನಗೆ ಮತ್ತು ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯ 2 ನೇ ಹೆಂಡತಿಗೆ 4 ಜನ ಮಕ್ಕಳು. ನನ್ನ ತಂದೆ ಭಾಗ್ಯಮ್ಮರವರನ್ನು ಮದುವೆಯಾದ ನಂತರ ನಾವು ನನ್ನ ತಾಯಿ, ನಮ್ಮ ತಂದೆ, ನಮ್ಮ ಚಿಕ್ಕಮ್ಮ ಭಾಗ್ಯಮ್ಮ ಮತ್ತು ಅವರು ಮಕ್ಕಳು ಎಲ್ಲರು ಒಂದೆ ಮನೆಯಲ್ಲಿ ವಾಸ ಮಾಡುತ್ತಿದ್ದೆವು. ನನ್ನ ಮದುವೆ 198889 ನೇ ಸಾಲಿನಲ್ಲಿ ಜರುಗಿರುತ್ತದೆ. ನನ್ನ ಮದುವೆಯಾದ 10 ವರ್ಷಗಳ ನಂತರ 2 ನೇ ವಾದಿ ಮದುವೆಯಾಗಿರುತ್ತದೆ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ, ಎರಡು ಕಡೆ ವಾಸ ಮಾಡುತ್ತಿರುತ್ತೇನೆ. ಇನ್ನೊಂದು ಮನೆ ಕೊರಟಗೆರೆಯಲ್ಲಿರುವ ಇನ್ನೊಂದು ಮನೆ ನನ್ನ ತಾಯಿಯ ಹೆಸರಿನಲ್ಲಿದ್ದು ಅದು ಅದು ಅವರ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ. ಸದರಿ ಆಸ್ತಿಯನು ಒಟ್ಟು ಕುಟುಂಬದ ಆದಾಯದಲ್ಲಿ ನನ್ನ ತಂದೆ ನನ್ನ ತಾಯಿಯ ಹೆಸರಿನಲ್ಲಿ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಮಗೆ ಭಾಗ ಬರಬೇಕಾಗಿಲ್ಲವೆಂದು ವಾದ ಪತ್ರದಲ್ಲಿ ಕಾಣಿಸಿರುವುದಿಲ್ಲ. ನನ್ನ ತಾಯಿ ಅವರ ಹೆಸರಿನಲ್ಲಿರುವ ಮನೆಯನ್ನು ಚೊಟು ಸಾಬ್ ರವರಿಂದ ಖರೀದಿಸಿರುತ್ತಾರೆ. ಆ ಬಗ್ಗೆ ಕ್ರಯಪತ್ರವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ತಾಯಿ ನನ್ನ ತಂದೆಯನ್ನು ಮದುವೆ ಮಾಡಿಕೊಂಡ ನಂತರ ಮನೆ ಕೆಲಸ ಹಾಗೂ ತೋಟದ ಕೆಲಸ ಮಾಡಿಕೊಂಡು ಮನೆಯಲ್ಲಿದ್ದರು ಎಂದರೆ ಸರಿ. ನನ್ನ ತಾಯಿ ಆ ಕೆಲಸಗಳನ್ನು ಬಿಟ್ಟು ಬೇರೆ ಕೆಲಸಗಳನ್ನು ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಾಯಿಗೆ ಮನೆಯನ್ನು ಖರೀದಿ ಮಾಡಲು ಬೇರೆ ಆದಾಯ ಇರಲಿಲ್ಲ ಎಂದರೆ ನನ್ನ ತಾಯಿಯ ತಾಯಿ ಮತ್ತು ಅವರ ತಮ್ಮನ ಸಹಾಯ ಇತ್ತು. ನನ್ನ ತಂದೆ 2 ನೇ ಮದುವೆ ಮಾಡಿಕೊಂಡ ನಂತರ ನನ್ನ ತಾಯಿ ಹಾಗೂ ನಮ್ಮನ್ನು ಸರಿಯಾಗಿ ನೋಡಿಕೊಳ್ಳದೇ ಇರುವಾಗ ನನ್ನ ಅಜ್ಜಿ ಮತ್ತು ನನ್ನ ಮಾವ ನಮಗೆ ಅವರ ಕೈಲಾದ ಸಹಾಯವನ್ನು ಮಾಡಿರುತ್ತಾರೆ. ನನ್ನ ತಾಯಿಯ ಮನೆ ಕಡೆಯವರಿಗೆ ಸಾಕಷ್ಟು ಆದಾಯ ಇರಲಲ್ಲ ಎಂದರೆ ಸರಿಯಲ್ಲ.

ಎಲ್ಲರೂ ಒಟ್ಟಿಗೆ ಇದ್ದಾಗ ಒಟ್ಟು ಕುಟುಂಬದ ಆದಾಯದಿಂದ ನನ್ನ ಹಾಗೂ 2 ನೇ ವಾದಿಯ ಮದುವೆಯನ್ನು ಮಾಡಿ ಕಳುಹಿಸಿರುತ್ತಾರೆಂದರೆ ಸರಿ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಾಕಾಶ ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**